# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ
# ವಾರ್ಷಿಕ ಪರೀಕ್ಷೆ – 2022

# 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ

(80 ಅಂಕಗಳು)

# ಪ್ರಶ್ನೆ ಪತ್ರಿಕೆಯ ನೀಲ ನಕಾಶೆ ಮತ್ತು ಪ್ರಶ್ನೆ ಪತ್ರಿಕೆ




ರಚನೆ

**ರವೀಶ್ ಕುಮಾರ್ ಬಿ.**

ನಿವೃತ್ತ ಕನ್ನಡ ಭಾಷಾ ಶಿಕ್ಷಕರು

ರಾಜ್ಯ ಸಂಪನ್ಮೂಲ ವ್ಯಕ್ತಿ (ಕನ್ನಡ)

ಮೈಸೂರು – 570033

ಸಂಚಾರಿ ವಾಣಿ ಸಂಖ್ಯೆ 9448958498

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ
# ವಾರ್ಷಿಕ ಪರೀಕ್ಷೆ – 2022

## 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

# ಪರಿವಿಡಿ


| ಹಂತದ ಸಂಖ್ಯೆ | ಹಂತದ ಹೆಸರು | ಪುಟ ಸಂಖ್ಯೆ ಇಂದ | ಪುಟ ಸಂಖ್ಯೆ ವರೆಗೆ |
|---|---|---|---|
| 1 | ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 3 |
| 2 | ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 3 | ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 4 | ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 4 | 4 |
| 5 | ನೀಲ ನಕಾಶೆ | 5 | 6 |
| 6 | ಪ್ರಶ್ನೆ ಪತ್ರಿಕೆ | 7 | 9 |
| 7 | ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ | 10 | 18 |

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ
# ವಾರ್ಷಿಕ ಪರೀಕ್ಷೆ – 2022
## 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 22.50 | 18 | 15 |
| 2 | ಗ್ರಹಿಕೆ | 33.75 | 27 | 11 |
| 3 | ಅಭಿವ್ಯಕ್ತಿ | 38.75 | 31 | 09 |
| 4 | ಪ್ರಶಂಸೆ | 05.00 | 04 | 01 |
| | **ಒಟ್ಟು** | **100.00** | **80** | **36** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 08.75 | 07 | 07 |
| 2 | ಕಿರು ಉತ್ತರ – 1 | 08.75 | 07 | 07 |
| 3 | ಕಿರು ಉತ್ತರ – 2 | 15.00 | 12 | 06 |
| 4 | ದೀರ್ಘ ಉತ್ತರ – 1 | 37.50 | 30 | 10 |
| 5 | ದೀರ್ಘ ಉತ್ತರ – 2 | 30.00 | 24 | 06 |
| | **ಒಟ್ಟು** | **100.00** | **80** | **36** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 40 | 32 | 22 |
| 2 | ಸಾಧಾರಣ | 50 | 40 | 12 |
| 3 | ಕಠಿಣ | 10 | 08 | 02 |
| | **ಒಟ್ಟು** | **100** | **80** | **36** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 27.50 | 22 | 10 |
| 2 | **ಪದ್ಯ ಒಟ್ಟು** | 30.00 | 24 | 08 |
| 3 | **ಪಠ್ಯಪೂರಕ ಅಧ್ಯಯನ** | 10.00 | 07 | 05 |
| 4 | **ಅಪಠಿತ ಗದ್ಯ** | 02.50 | 03 | 01 |
| 5 | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 30.00 | 24 | 12 |
| | **ಸಮಗ್ರ ಒಟ್ಟು** | **100.00** | **80** | **36** |

ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಕನ್ನಡ ಮೌಲ್ವಿ | 03 | 02 |
| 2 | ಬೆಡಗಿನ ತಾಣ ಜಯಪುರ | 03 | 01 |
| 3 | ಧರ್ಮಸಮದೃಷ್ಟಿ | 03 | 01 |
| 4 | ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್ | 03 | 01 |
| 5 | ಪ್ರಜಾನಿಷ್ಠೆ | 02 | 01 |
| 6 | ಜನಪದ ಕಲೆಗಳ ವೈಭವ | 02 | 01 |
| 7 | ಊರುಭಂಗ | 04 | 01 |
| 8 | ಹರಲೀಲೆ | 02 | 02 |
| | ಗದ್ಯ ಒಟ್ಟು | 22 | 10 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಹೊಸಹಾಡು | 03 | 01 |
| 2 | ಪಾರಿವಾಳ | 03 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | 03 | 01 |
| 4 | ನಿಯತಿನಾರ್ ಮೀಱಿದಪರ್ | 01 | 01 |
| 5 | ಮರಳಿ ಮನೆಗೆ | 04 | 01 |
| 6 | ತತ್ತ್ವಪದಗಳು | 04 | 01 |
| 7 | ನಿನ್ನ ಮುತ್ತಿ ಸತ್ತಿಗೆಯನ್ನಿತ್ತು ಸಲಹು | 04 | 01 |
| 8 | ಕನ್ನಡ ನಾಡು ನುಡಿ | 02 | 01 |
| | ಪದ್ಯ ಒಟ್ಟು | 24 | 08 |

## 3. ಪಠ್ಯ ಪೂರಕ ಅಧ್ಯಯನ

| ಕ್ರ.ಸಂ | ಪಠ್ಯಪೂರಕ ಅಧ್ಯಯನ ಪಾಠದ ಹೆಸರು | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಗುಣಸಾಗರಿ ಪಂಡರೀಬಾಯಿ | 01 | 01 |
| 2 | ರಂಜಾನ್ ಸುರಕುಂಬಾ | 01 | 01 |
| 3 | ನನ್ನಾಸೆ | 02 | 01 |
| 4 | ಉರಿದ ಬದುಕು | 02 | 01 |
| 5 | ಪುಟ್ಟಹಕ್ಕಿ | 01 | 01 |
| | ಪದ್ಯ ಒಟ್ಟು | 07 | 05 |

## 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ಅಪಠಿತ ಗದ್ಯ | 03 | 01 (1+2) |

## 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|
| 1 | ವ್ಯಾಕರಣಾಂಶಗಳು | 07 | 07 |
| 2 | ಅಲಂಕಾರ | 03 | 01 |
| 3 | ಛಂದಸ್ಸು | 03 | 01 |
| 4 | ಗಾದೆ ವಿಸ್ತರಣೆ | 03 | 01 |
| 5 | ಪತ್ರಲೇಖನ | 04 | 01 |
| 6 | ಪ್ರಬಂಧ ಲೇಖನ | 04 | 01 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 24 | 12 |

## ಹಂತ : 5(ಎ). ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ – ವಾರ್ಷಿಕ ಪರೀಕ್ಷೆ – 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಕನ್ನಡ ಮೌಲ್ವಿ | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 2 | ಬೆಡಗಿನ ತಾಣ ಜಯಪುರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಧರ್ಮ ಸಮದೃಷ್ಟಿ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ಆದರ್ಶ ಶಿಕ್ಷಕ ಸರ್ವೆಪಲ್ಲಿ ರಾಧಾಕೃಷ್ಣ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 5 | ಪ್ರಜಾನಿಷ್ಠೆ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 6 | ಜನಪದ ಕಲೆಗಳ ವೈಭವ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 7 | ಊರುಭಂಗ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 8 | ಹರಲೀಲೆ | ** | 2(1) | ** | ** | ** | ** | ** | ** | ** | ** | ** | ** | ** | ** | ** | 2(1) | ** | ** | ** | ** | 02 | 02 |
| | **ಗದ್ಯ ಒಟ್ಟು** | ** | **3(1)** | ** | ** | ** | ** | **3(2)** | 1(3) | ** | ** | **2(3)** | **1(4)** | ** | ** | ** | **3(1)** | **3(2)** | **3(3)** | **1(4)** | ** | **22** | **10** |
| 1 | ಹೊಸಹಾಡು | ** | ** | ** | | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 2 | ಪಾರಿವಾಳ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಸಿರಿಯನಿನ್ನೇನ ಬಣ್ಣಿಪೆನು | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 4 | ನಿಯತಿಯನಾರ್ ಮೀಱಿದಪರ್ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 5 | ಮರಳಿ ಮನೆಗೆ | ** | ** | ** | 1(4) | ** | ** | ** | ** | ** | ** | ** | ** | ** | ** | ** | ** | ** | ** | 1(4) | ** | 04 | 01 |
| 6 | ತತ್ತ್ವಪದಗಳು | ** | ** | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | 1(4) | ** | 04 | 01 |
| 7 | ನಿನ್ನ ಮುತ್ತಿ ಸತ್ತಿಗೆಯನ್ನಿತ್ತು ಸಲಹು | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 8 | ಕನ್ನಡ ನಾಡು ನುಡಿ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| | **ಪದ್ಯ ಒಟ್ಟು** | ** | **1(1)** | ** | **1(4)** | ** | ** | **1(2)** | 1(3) | ** | ** | **2(3)** | **1(4)** | ** | **1(4)** | ** | **1(1)** | **1(2)** | **3(3)** | **3(4)** | ** | **24** | **08** |
| 1 | ಗುಣಸಾಗರಿ ಫಂಡರೀಬಾಯಿ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 2 | ರಂಜಾನ್ ಸುರಕುಂಬಾ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 3 | ನನ್ನಾಸೆ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 4 | ಉರಿದ ಬದುಕು | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 5 | ಪುಟ್ಟಹಕ್ಕಿ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| | **ಪಠ್ಯಪೂರಕ ಅಧ್ಯಯನ ಒಟ್ಟು** | ** | **3(1)** | ** | ** | ** | ** | **2(2)** | ** | ** | ** | ** | ** | ** | ** | ** | **3(1)** | **2(2)** | ** | ** | ** | **07** | **05** |
| 1 | **ಅಪಠಿತ ಗದ್ಯ** | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | **03** | **01** |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

| ಕ್ರ ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | ** | ** | ** | ** | ** | 1(3) | ** | | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 05 | 01 |
| 6 | ವ್ಯಾಕಣಾಂಶಗಳು | **07(1))** | ** | ** | ** | ** | ** | ** | ** | ** | ** | ** | ** | ** | ** | **07(1)** | ** | ** | ** | ** | ** | 07 | 07 |
| | **ಒಟ್ಟು** | **07(1)** | ** | ** | ** | ** | ** | ** | **2(3)** | ** | ** | 1(3) | ** | **2(5)** | ** | **07(1)** | ** | ** | **3(3)** | ** | ** | **24** | **12** |
| | **ಸಮಗ್ರ ಒಟ್ಟು** | **07(1)** | **07(1)** | ** | **1(4)** | ** | ** | **6(2)** | **5(3)** | ** | ** | **5(3)** | **4(4)** | **2(5)** | **1(4)** | **07(1)** | **7(1)** | **6(2)** | **10(3)** | **6(4)** | ** | **80** | **45** |
| | | **18 – 15** | | | | **27 – 11** | | | | | **31 – 09** | | | | **4 – 1** | **80 – 36** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ
# ವಾರ್ಷಿಕ ಪರೀಕ್ಷೆ – 2022

## 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

**ಸಮಯ : 03–15 ಗಂಟೆಗಳು** **ಗರಿಷ್ಠ ಅಂಕಗಳು : 80**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **4 * 1 = 4**

1. ಇವುಗಳಲ್ಲಿ 'ಅಂಶಿ' ಸಮಾಸ'ಕ್ಕೆ ಉದಾಹರಣೆಯಾದ ಪದವಿದು;
   (ಎ) ದಿವ್ಯಪ್ರಕಾಶ (ಬಿ) ಮುಂದಲೆ
   (ಸಿ) ಬೆಟ್ಟದಾವರೆ (ಡಿ) ಒಗ್ಗಟ್ಟು
2. 'ಷಡಾನನ' ಪದದಲ್ಲಾಗಿರುವ ಸಂಧಿ;
   (ಎ) ಜಶ್ತ್ವ (ಬಿ) ಸವರ್ಣದೀರ್ಘ
   (ಸಿ) ಶ್ಚುತ್ವ (ಡಿ) ಯಣ್
3. ಹೊಸಗನ್ನಡದ ಸಪ್ತಮಿ ವಿಭಕ್ತಿ ಪ್ರತ್ಯಯ ಇದಾಗಿದೆ;
   (ಎ) ಅನ್ನು (ಬಿ) ಇಂದ
   (ಸಿ) ಅ (ಡಿ) ಅಲ್ಲಿ
4. 'ಕಂದ ಪದ್ಯ'ದಲ್ಲಿರುವ ಪಾದಗಳ ಸಂಖ್ಯೆ:
   (ಎ) ನಾಲ್ಕು (ಬಿ) ಎರಡು
   (ಸಿ) ಆರು (ಡಿ) ಮೂರು

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **3 * 1 = 3**

5. ವೈಶಾಖ : ಬೇಸುಗೆ : : ಸಂಸ್ಕೃತ : ____________________
6. ನಿತ್ಯ : ಅನಿತ್ಯ : : ಸತ್ಯ : ____________________
7. ದುರ್ಯೋಧನ : ದುರ್ಜಯ : : ದ್ರೋಣ : ____________________

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 * 1 = 7**

8. ಮೌಲ್ವಿ ಅವರು ಹಿಡಿದಿದ್ದ ಕನ್ನಡ ಪುಸ್ತಕ ಯಾವುದು?
9. ಗಿರಿಜೆ ಎಲ್ಲಿ ಇರಬೇಕೆಂದು ಶಿವನು ತಿಳಿಸಿದನು?
10. 'ನಂಬಿಯಣ್ಣ'ನ ಪೂರ್ವಜನ್ಮದ ಹೆಸರೇನು?
11. ಮುತ್ತುಗದ ಹೂವುಗಳು ಎಲ್ಲಿ ಉದುರಿ ಬಿದ್ದದ್ದವು?
12. ಪಂಡರಿಬಾಯಿ ಅವರು ನಟಿಸಿದ ಮೊದಲ ಚಿತ್ರ ಯಾವುದು?
13. ರಂಜಾನ್ ಹಬ್ಬದ ಸಡಗರ ಯಾವಾಗ ಶುರುವಾಗುತ್ತದೆ?
14. ಪುಟ್ಟಹಕ್ಕಿಯು ಗೂಡನ್ನು ಹೇಗೆ ಕಟ್ಟುತ್ತದೆ?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **6 * 2 = 12**

15. ಕನ್ನಡ ಮೌಲ್ವಿ ಅವರ ವೇಷಭೂಷಣ ಹೇಗಿತ್ತು?
16. ದೈವದವರ ತೀರ್ಪಿನ ಬಗೆಗೆ ಶಾಂತಲೆಯ ಅಭಿಪ್ರಾಯವೇನು? ತಿಳಿಸಿ.
17. ವೀರಗಾಸೆ ಕುಣಿತದ ವೇಷಭೂಷಣಗಳು ಹೇಗೆ ಇರುತ್ತವೆ? ವಿವರಿಸಿ.
18. ಕನ್ನಡ ನುಡಿಯಲ್ಲೇ ಮೋಕ್ಷ ಸಾಧನೆ ಎಂದು ಕವಿ ಮಹಲಿಂಗರಂಗ ಹೇಗೆ ವಿವರಿಸಿದ್ದಾನೆ?
19. 'ನನ್ನಾಸೆ' ಕವನದಲ್ಲಿ ಕವಯಿತ್ರಿ ಅವರ ಆಸೆಗಳೇನು?
20. ದುರ್ಗಪ್ಪನು ಶಂಕರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳಾವುವು? ತಿಳಿಸಿ.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ.** **2 * 3 = 6**

21. ಶಿವರಾಮ ಕಾರಂತ
22. ಸು. ರಂ. ಎಕ್ಕುಂಡಿ

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 * 3 = 3**

23. ನಿಂದು ನರಪತಿ ತಳಾಜಿಂ
ಗಂದಂ ನೀನ್ ಬರಿಸು ಮನುಜಯುಗಮಂ ಮುನ್ನಂ ।

**ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ.** **1 * 3 = 3**

24. ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು.

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1 * 3 = 3**

25. ತುಂಬಿದ ಕೊಡ ತುಳುಕುವುದಿಲ್ಲ.
ಅಥವಾ
ದೂರದ ಬೆಟ್ಟ ನುಣ್ಣಗೆ

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **4 * 3 = 12**

26. "ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು"
27. "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ"
28. "ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"
29. "ಚಂದಿರನೋ ಭಾಸ್ಕರನೋಯೆಂಬಂತೆ"

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1 * 4 = 4**

30. ಬುದ್ಧನೆಂದರೆ ________________
________________________
________________________
____________________ ರಥದಿ – ಬಾರಯ್ಯೊ ಬಾರೊ
ಅಥವಾ
ಬಾರಯ್ಯ ________________
________________________
________________________
____________________ ನುಡಿ – ಬಾರಯ್ಯೊ ಬಾರೊ

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.** **1 * 4 = 4**

31. ಮಾತಿನೊಳಗ ಮಾತಿಲ್ಲದವನ ಸ್ನೇಹ
ಜಾತಿಜನ್ಮಕಬೇಡ ।
ಹೀನ ಮನುಷ್ಯರ ಸ್ನೇಹ ಮಾಡಿ
ನೀನು ಕೆಡಲಿಬೇಡ ॥

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 * 4 = 8**

32. ದುರ್ಯೋಧನ ಮತ್ತು ದುರ್ಜಯರ ನಡುವೆ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.
ಅಥವಾ
ಅಶ್ವತ್ಥಾಮನು ದುರ್ಯೋಧನನ ಬಳಿ ಸಾರುವ ಮೊದಲು ಆಡಿದ ನುಡಿಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

33. ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ ಗಾನರಾಣಿಯರು ಹೇಳಿದ ಮಾತುಗಳನ್ನು ತಿಳಿಸಿ.

ಅಥವಾ

ಹರಿಶ್ಚಂದ್ರ ಮತ್ತು ಗಾನರಾಣಿಯರ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.

34. **ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01*03 =03 (1+2)**

ಮಹಾತ್ಮ ಗಾಂಧೀಜಿ ಅವರು ಅಂದವಾದ ಬರೆವಣಿಗೆಯ ಮಹತ್ತ್ವವನ್ನು ಕುರಿತು ಹೀಗೆ ಹೇಳುತ್ತಾರೆ. "ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಅವಶ್ಯಕ ಅಂಶವಲ್ಲವೆಂಬ ಭಾವನೆ ನನಗೆ ಹೇಗೆ ಬಂತೋ ಕಾಣೆ. ಇಂಗ್ಲೆಂಡ್‌ಗೆ ಹೋಗುವವರೆಗೆ ನನ್ನಲ್ಲಿ ಇದೇ ಭಾವನೆ ಇತ್ತು. ಅನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತುಪೋಣಿಸಿದಂತಿದ್ದ ಸುಂದರ ಬರೆವಣಿಗೆ ನೋಡಿ, ನನಗೆ ನಾಚಿಕೆಯೂ ಪಶ್ಚಾತ್ತಾಪವೂ ಉಂಟಾಯಿತು. ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ನಾನು ಅರಿತೆನು. ಈಚೆಗೆ ನನ್ನ ಬರೆಹವನ್ನು ತಿದ್ದಿಕೊಳ್ಳಬೇಕೆಂದು ಪ್ರಯತ್ನಿಸಿದೆ. ಸುಟ್ಟ ಮಡಕೆಗೆ ಹಸಿ ಮಣ್ಣನ್ನು ಮೆತ್ತಲು ಸಾಧ್ಯವೇ? ಆ ವೇಳೆಗೆ ಕಾಲ ಮೀರಿ ಹೋಗಿತ್ತು. ಚಿಕ್ಕ ವಯಸ್ಸಿನಲ್ಲಿ ಅಸಡ್ಡೆ ಮಾಡಿದುದನ್ನು ಇಂದಿನವರೆಗೆ ತಿದ್ದಿಕೊಳ್ಳಲು ಆಗಲಿಲ್ಲ. ನನ್ನ ಉದಾಹರಣೆಯಿಂದ ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಿ. ಅಕ್ಷರ ಬರೆಯುವುದನ್ನು ಕಲಿಸುವುದಕ್ಕೆ ಮುಂಚೆ ಮಕ್ಕಳಿಗೆ ಚಿತ್ರಕಲೆ ಅಭ್ಯಾಸ ಮಾಡಿಸಬೇಕೆಂಬುದು ನನ್ನ ಈಗಿನ ಅಭಿಪ್ರಾಯ. ಹಕ್ಕಿ, ಹೂವು ಮುಂತಾದವನ್ನು ನೋಡಿ ತಿಳಿದುಕೊಳ್ಳುವಂತೆ ಮಕ್ಕಳ ಅಕ್ಷರಗಳನ್ನೂ ನೋಡಿ ತಿಳಿದುಕೊಳ್ಳಲಿ. ವಸ್ತುಗಳ ಚಿತ್ರಗಳನ್ನು ಬರೆಯುವಂತೆ, ಅವುಗಳನ್ನು ಬರೆಯುವುದನ್ನು ಕಲಿತ ನಂತರವೇ ಅಕ್ಷರ ಬರೆಯುವುದನ್ನು ಕಲಿತುಕೊಳ್ಳಲಿ, ಆಗ ಅವರ ಬರೆಹ ಅಂದವಾಗಿ ಮುದ್ದಾಗುತ್ತದೆ."

**ಪ್ರಶ್ನೆಗಳು :**

1. ಅಂದವಾದ ಬರೆವಣಿಗೆಯ ಬಗೆಗೆ ಗಾಂಧೀಜಿ ಅವರ ಅಭಿಪ್ರಾಯವೇನು? (2 ಅಂಕಗಳು)
2. ಯಾವುದನ್ನು ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಬೇಕು? (1 ಅಂಕ)

35. ನಿಮ್ಮನ್ನು ಚಾಮರಾಜನಗರದ ಜೆ. ಎಸ್. ಎಸ್. ಪ್ರೌಢಶಾಲೆಯ ವಿದ್ಯಾರ್ಥಿ 'ವಸಂತ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಡುವಂತೆ ಕೋರಿ, ನಿಮ್ಮ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ. 1 * 4 = 4

ಅಥವಾ

ನಿಮ್ಮನ್ನು ಕೊಡಗು ಜಿಲ್ಲೆಯ ಸೋಮವಾರಪೇಟೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿ 'ಯಶವಂತ' ಎಂದು ಭಾವಿಸಿಕೊಂಡು, ಕೊಡಗು ಜಿಲ್ಲೆಯ ಕುಶಾಲನಗರ ನಿವಾಸಿಯಾದ ನಿಮ್ಮ ತಂದೆ 'ಬಸವಣ್ಣ' ಎಂಬುವವರನ್ನು, ನಿಮ್ಮ ಶಾಲೆಯ ಪ್ರತಿಭಾ ಕಾರಂಜಿ ಸಮಾರಂಭಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

36. **ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1 * 4 = 4**

- ರಾಷ್ಟ್ರೀಯ ಹಬ್ಬಗಳ ಮಹತ್ತ್ವ
- ಸಮೂಹ ಮಾಧ್ಯಮಗಳು

---- 0 ----

## ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ
## ವಾರ್ಷಿಕ ಪರೀಕ್ಷೆ – 2022

### 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**ಸಮಯ : 3.00 ಗಂಟೆಗಳು** **ಗರಿಷ್ಠ ಅಂಕಗಳು : 80**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **4 * 1 = 4**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. ಇವುಗಳಲ್ಲಿ 'ಅಂಶಿ' ಸಮಾಸ'ಕ್ಕೆ ಉದಾಹರಣೆಯಾದ ಪದವಿದು;
   (ಎ) ದಿವ್ಯಪ್ರಕಾಶ (ಬಿ) ಮುಂದಲೆ
   (ಸಿ) ಬೆಟ್ಟದಾವರೆ (ಡಿ) ಒಗ್ಗಟ್ಟು

   **ಸರಿಯುತ್ತರ : (ಬಿ) ಮುಂದಲೆ**

2. 'ಷಡಾನನ' ಪದದಲ್ಲಾಗಿರುವ ಸಂಧಿ;
   (ಎ) ಜಶ್ತ್ವ (ಬಿ) ಸವರ್ಣದೀರ್ಘ
   (ಸಿ) ಶ್ಚುತ್ವ (ಡಿ) ಯಣ್

   **ಸರಿಯುತ್ತರ : (ಎ) ಜಶ್ತ್ವ**

3. ಹೊಸಗನ್ನಡದ ಸಪ್ತಮಿ ವಿಭಕ್ತಿ ಪ್ರತ್ಯಯ ಇದಾಗಿದೆ;
   (ಎ) ಅನ್ನು (ಬಿ) ಇಂದ
   (ಸಿ) ಅ (ಡಿ) ಅಲ್ಲಿ

   **ಸರಿಯುತ್ತರ : (ಡಿ) ಅಲ್ಲಿ**

4. 'ಕಂದ ಪದ್ಯ'ದಲ್ಲಿರುವ ಪಾದಗಳ ಸಂಖ್ಯೆ:
   (ಎ) ನಾಲ್ಕು (ಬಿ) ಎರಡು
   (ಸಿ) ಆರು (ಡಿ) ಮೂರು

   **ಸರಿಯುತ್ತರ : (ಎ) ನಾಲ್ಕು**

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **3 * 1 = 3**

**(ಪ್ರತಿ ಸರಿಯುತ್ತರಕ್ಕೆ 1 ಅಂಕ)**

5. ವೈಶಾಖ : ಬೇಸುಗೆ : : ಸಂಸ್ಕೃತ : **ಸಕ್ಕದ**
6. ನಿತ್ಯ : ಅನಿತ್ಯ : : ಸತ್ಯ : **ಅಸತ್ಯ**
7. ದುರ್ಯೋಧನ : ದುರ್ಜಯ : : ದ್ರೋಣ : **ಅಶ್ವತ್ಥಾಮ**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 * 1 = 7**

**(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)**

8. **ಮೌಲ್ವಿ ಅವರು ಹಿಡಿದಿದ್ದ ಕನ್ನಡ ಪುಸ್ತಕ ಯಾವುದು?**
   ಮೌಲ್ವಿ ಹಿಡಿದಿದ್ದ ಕನ್ನಡದ ಪುಸ್ತಕ **'ಕುಮಾರವ್ಯಾಸ ಭಾರತ.'**

**9. 'ನಂಬಿಯಣ್ಣ'ನ ಪೂರ್ವಜನ್ಮದ ಹೆಸರೇನು?**
ನಂಬಿಯಣ್ಣನ ಪೂರ್ವಜನ್ಮದ ಹೆಸರು **ಪುಷ್ಪದತ್ತ.**

**10. ಗಿರಿಜೆ ಎಲ್ಲಿ ಇರಬೇಕೆಂದು ಶಿವನು ತಿಳಿಸಿದನು?**
ಶಿವನು ಗಿರಿಜೆಗೆ **"ನಾನು ಯಾವ ಊರಿನೊಳಿರುವೆನೋ ಅಲ್ಲಿಯ ದೇವಾಲಯದಲ್ಲಿ ನೀನು ಇರುವುದು"** ಎಂದು ತಿಳಿಸಿದನು.

**11. ಮುತ್ತುಗದ ಹೂವುಗಳು ಎಲ್ಲಿ ಉದುರಿ ಬಿದ್ದದ್ದವು?**
ಮುತ್ತುಗದ ಹೂಗಳು **ಚಂಡಮಾರಿಯ ವನದಲ್ಲಿ** ಉದುರಿ ಬಿದ್ದಿದ್ದವು.

**12. ಪಂಡರಿಬಾಯಿ ಅವರು ನಟಿಸಿದ ಮೊದಲ ಚಿತ್ರ ಯಾವುದು?**
ಪಂಡರೀಬಾಯಿ ಅವರು ನಟಿಸಿದ ಮೊದಲ ಚಿತ್ರ 'ವಾಣಿ.'

**13. ರಂಜಾನ್ ಹಬ್ಬದ ಸಡಗರ ಯಾವಾಗ ಶುರುವಾಗುತ್ತದೆ?**
**ಚಾಂದ (ಚಂದ್ರ) ಮುಖದೋರಿದ ಮೇಲೆ** ರಂಜಾನ್ ಹಬ್ಬದ ಸಡಗರವು ಶುರುವಾಗುತ್ತದೆ.

**14. ಪುಟ್ಟಹಕ್ಕಿಯು ಗೂಡನ್ನು ಹೇಗೆ ಕಟ್ಟುತ್ತದೆ?**
ಪುಟ್ಟಹಕ್ಕಿಯು ಗೂಡನ್ನು **ಕಡ್ಡಿಕಡ್ಡಿ ಕೂಡಿಸಿ** ಕಟ್ಟುತ್ತದೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 06 * 2 = 12**
**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

**15. ಕನ್ನಡ ಮೌಲ್ವಿ ಅವರ ವೇಷಭೂಷಣ ಹೇಗಿತ್ತು?**
ಕನ್ನಡ ಮೌಲ್ವಿ ಅವರಿಗೆ ವಯಸ್ಸು ಸುಮಾರು 55–58 ಆಗಿತ್ತು. ಅವರು ಅಜಾನುಬಾಹುವಾಗಿ, ಪುಷ್ಟವಾಗಿ ಬೆಳೆದಿದ್ದ ಎತ್ತರದ ಕೆಂಪನೆಯ ಆಳು. ಮುಖದಲ್ಲಿ ಒಳ್ಳೆಯ ಕಳೆ, ತೀಕ್ಷ್ಣವಾದ ಕಣ್ಣಿನ ದೃಷ್ಟಿ, ಪೂರ್ಣ ಬೆಳ್ಳಗಾಗಿ ಹತ್ತಿಯ ತುಪ್ಪಳದಂತೆ ತೋರುತ್ತಿತ್ತು. ಗಡ್ಡ, ವಿಶಾಲವಾದ ಹಣೆ, ಗಂಭೀರವಾದ ಮುಖ, ಮಡಿ–ಮಡಿ ಇಸ್ತ್ರೀ ಮಾಡಿದ್ದ ಬಿಳಿಯ ಶರಾಯಿ ಧರಿಸಿದ್ದರು. ಇವು ಕನ್ನಡ ಮೌಲ್ವಿಯ ವೇಷಭೂಷಣಗಳು.

**16. ದೈವದವರ ತೀರ್ಪಿನ ಬಗೆಗೆ ಶಾಂತಲೆಯ ಅಭಿಪ್ರಾಯವೇನು? ತಿಳಿಸಿ.**
"ಭೂಮಿಯಲ್ಲಿ ಸಿಕ್ಕಿದ ಹೊನ್ನು ಇಬ್ಬರಿಗೂ ಬೇಡವಾದ ಮೇಲೆ ರಾಜ್ಯದ ಬೊಕ್ಕಸ ಸೇರಲಿ" ಎಂದು ದೈವದವರು ತೀರ್ಪು ನೀಡಿದರು. ಆಗ ಶಾಂತಲೆಯು "ಬೊಕ್ಕಸಕ್ಕೆ ಸೇರಲು ಈ ಹೊನ್ನು ಸಾಮ್ರಾಟರ ದುಡಿಮೆಯಲ್ಲ, ಅದು ಪ್ರಜೆಗಳ ಬೆವರಿನ ಫಲ, ಹೀಗಾಗಿ ಈ ಹೊನ್ನು ಈ ಊರಿನ ಏಳಿಗೆಗೇ ವಿನಿಯೋಗವಾಗಬೇಕು" ಎಂಬುದು ದೈವದವರ ತೀರ್ಪಿನ ಬಗೆಗೆ ಶಾಂತಲೆಯ ಅಭಿಪ್ರಾಯವಾಗಿತ್ತು.

**17. ವೀರಗಾಸೆ ಕುಣಿತದ ವೇಷಭೂಷಣಗಳು ಹೇಗೆ ಇರುತ್ತವೆ? ವಿವರಿಸಿ.**
ವೀರಗಾಸೆ ಕುಣಿತದವರ ವೇಷಭೂಷಣ ವಿಶೇಷವಾಗಿರುತ್ತದೆ. ವೀರಗಾಸೆ ಕುಣಿತದವರು ಬಿಳಿಯ ಪಂಚೆಯ ವೀರಗಚ್ಚೆ, ತಲೆಗೆ ಅರಿಶಿಣ ಅಥವಾ ನೀಲಿ ಬಣ್ಣದ ರುಮಾಲು, ಕಾವಿ ಬಣ್ಣದ ಕಸೆಯಂಗಿ, ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಗೆ ವಿಭೂತಿ, ಕರ್ಣಕುಂಡಲ, ಸೊಂಟಪಟ್ಟಿ, ಬಿಚ್ಚುಗತ್ತಿ ಕಾಲ್ಗೆಜ್ಜೆ ಧರಿಸುತ್ತಾರೆ.

**18. ಕನ್ನಡ ನುಡಿಯಲ್ಲೇ ಮೋಕ್ಷ ಸಾಧನೆ ಎಂದು ಕವಿ ಮಹಲಿಂಗರಂಗ ಹೇಗೆ ವಿವರಿಸಿದ್ದಾನೆ?**
ಮಹಲಿಂಗರಂಗನು "ಸುಲಿದ ಬಾಳೆಯ ಹಣ್ಣಿನಂತೆ; ಪಕ್ವವಾದ ಜಲ್ಲೆ ಕಬ್ಬಿನಂತೆ; ತಣ್ಣಗಾದ ಹಾಲಿನಂತೆ ಸುಲಭವಾಗಿರುವ, ಲಲಿತವಾಗಿರುವ ಕನ್ನಡ ಭಾಷೆಯನ್ನು ಕಲಿತು, ಅರಿತು ಅದರಿಂದಲೇ ಮೋಕ್ಷಸಾಧನೆಯನ್ನು ಮಾಡಿಕೊಳ್ಳಬಹುದು. ಆದ್ದರಿಂದ ಮೋಕ್ಷ ಸಾಧನೆಯನ್ನು ಮಾಡಲು ಸಂಸ್ಕೃತ ಭಾಷೆಯು ಅನಿವಾರ್ಯವಾದುದಲ್ಲ" ಎಂದು ಹೇಳುತ್ತಾನೆ.

**19. 'ನನ್ನಾಸೆ' ಕವನದಲ್ಲಿ ಕವಯಿತ್ರಿ ಅವರ ಆಸೆಗಳೇನು?**
ತನ್ನನ್ನೇ ಸುಟ್ಟು ಬೆಳಕು ನೀಡುವ ಬತ್ತಿ, ಪುಣ್ಯವಂತರಿಗೆ ನೆರಳಾಗುವ ಮರ, ದಾಹಗೊಂಡವರ ತಣಿಸುವ ನೀರಿನ ಚಿಲುಮೆ, ಅಳುವ ಕಂದನ ನಗಿಸುವ ಅಮ್ಮನ ಕಂಠದ ಜೋಗುಳ, ಮಾನವನ ಅಜ್ಞಾನವನ್ನು ತೊಲಗಿಸುವ ವಾಗ್ದೇವಿಯ ಕೈಯ ಗ್ರಂಥ, ಮುಸ್ಸಂಜೆ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲು, ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯ ಆಗಬೇಕು ಎಂಬುದು ಕವಯಿತ್ರಿ ಅವರ ಆಸೆಗಳಾಗಿವೆ.

**20.** **ದುರ್ಗಪ್ಪನು ಶಂಕರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳಾವುವು? ತಿಳಿಸಿ.**

ದುರ್ಗಪ್ಪ ಶಂಕರಣ್ಣನಿಗೆ "ಕುಡಿ ತಮ್ಮಾ, ಜೀವ ಬದುಕ್ಲಿ ಮೊದ್ಲು, ಜೀವಕ್ಕ ಯಾವ್ ಕುಲಾನೂ ಇಲ್ಲ. ಗಾಳಿಗೆ ಕುಲಾ ಅದೇನು ತಮ್ಮಾ, ನೀರಿಗೆ ಕುಲಾ ಅದೇನು ತಮ್ಮಾ, ನೆಲಕ್ಕ ಕುಲಾ ಅದೇನು? ಅದು ನಾವು ಮಾಡಿಕೊಂಡದ್ದು, ಕುಡಿ" ಎಂದು ಕುಲದ ಬಗೆಗೆ ನೀತಿ ಮಾತುಗಳನ್ನು ಹೇಳಿದನು.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ.**

**2 * 3 = 6**

| | |
|---|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ವಾಕ್ಯರೂಪದಲ್ಲಿ ಬರೆಯುವುದು, ಭಾಷಾ ಶೈಲಿ** | **1 ಅಂಕ** |
| **ಒಟ್ಟು** | **3 ಅಂಕಗಳು** |

**21.** **ಶಿವರಾಮ ಕಾರಂತ**

**ಕಡಲತೀರದ ಭಾರ್ಗವ** ಎಂದು ಪ್ರಸಿದ್ಧರಾದ **ಶ್ರೀ ಕೋಟ ಶಿವರಾಮ ಕಾರಂತ** ಅವರು **ಕ್ರಿ. ಶ. 1902** ರಲ್ಲಿ ಉಡುಪಿ ಜಿಲ್ಲೆಯ **ಕೋಟ**ದಲ್ಲಿ ಜನಿಸಿದರು.

ಇವರು ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ವಿಜ್ಞಾನ, ಯಕ್ಷಗಾನ, ಪ್ರವಾಸ ಸಾಹಿತ್ಯ, ಶಿಕ್ಷಣ, ಪರಿಸರ, ಗೀತನಾಟಕ, ನಾಟಕ, ಪತ್ರಿಕೋದ್ಯಮ, ಚಲನಚಿತ್ರ – ಹೀಗೆ ಹಲವು ಕ್ಷೇತ್ರಗಳಲ್ಲಿ ಪರಿಣತಿ ಪಡೆದಿದ್ದರು. ಇವರು **ಅಬುವಿನಿಂದ ಬರಾಮಕ್ಕೆ**, ಮೂಕಜ್ಜಿಯ ಕನಸುಗಳು, ಚೋಮನದುಡಿ, ಮರಳಿ ಮಣ್ಣಿಗೆ, ಬೆಟ್ಟದ ಜೀವ, ಅಳಿದ ಮೇಲೆ, ಅಪೂರ್ವ ಪಶ್ಚಿಮ, ಯಕ್ಷಗಾನ ಬಯಲಾಟ, ಹುಚ್ಚು ಮನಸ್ಸಿನ ಹತ್ತು ಮುಖಗಳು, ಮೈಮನಗಳ ಸುಳಿಯಲ್ಲಿ – ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಶ್ರೀಯುತರಿಗೆ **'ಭಾರತೀಯ ಜ್ಞಾನಪೀಠ ಪ್ರಶಸ್ತಿ'**, **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'**, **'ಪಂಪ ಪ್ರಶಸ್ತಿ'** – ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**22.** **ಸು. ರಂ. ಎಕ್ಕುಂಡಿ**

**ಶ್ರೀ ಸುಬ್ಬಣ್ಣ ರಂಗನಾಥ ಎಕ್ಕುಂಡಿ** (ಸು. ರಂ. ಎಕ್ಕುಂಡಿ) ಅವರು **ಕ್ರಿ. ಶ. 1923** ರಲ್ಲಿ ಹಾವೇರಿ ಜಿಲ್ಲೆಯ **ರಾಣಿಬೆನ್ನೂರಿ**ನಲ್ಲಿ ಜನಿಸಿದರು.

ಇವರು ಪ್ರೌಢಶಾಲಾ ಅಧ್ಯಾಪಕರಾಗಿ ಸುದೀರ್ಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ಸಮಗ್ರ ಕಥನ ಕವನಗಳು, ಶ್ರೀ ಆನಂದತೀರ್ಥರು, ಸಂತಾಪ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬಕುಳದ ಹೂಗಳು, ನೆರಳು, ಪ್ರತಿಬಿಂಬಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಶ್ರೀಯುತರಿಗೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 * 3 = 3**

| | |
|---|---|
| **ಪ್ರಸ್ತಾರ ಹಾಕುವುದು** | **1 ಅಂಕ** |
| **ಗಣ ವಿಭಾಗಿಸುವುದು** | **1 ಅಂಕ** |
| **ಛಂದಸ್ಸಿನ ಹೆಸರು ಬರೆಯುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

**23.** **ನಿಂದು ನರಪತಿ ತಳಾಱಿಂ**
**ಗಂದಂ ನೀನ್ ಬರಿಸು ಮನುಜಯುಗಮಂ ಮುನ್ನಂ ।**

| 4 | 4 | 4 |
|---|---|---|
| — ᑌ ᑌ | ᑌᑌᑌ ᑌ | — — |
| ನಿಂದು ನ | ರಪತಿ ತ | ಳಾಜಿಂ |

| 4 | 4 | 4 | 4 | 4 |
|---|---|---|---|---|
| — — | — ᑌ ᑌ | ᑌ ᑌ ᑌ ᑌ | ᑌ ᑌ — | — — |
| ಗಂದಂ | ನೀ ಬರಿ | ಸುಮನುಜ | ಯುಗಮಂ | ಮುನ್ನಂ |

ಈ ಮೇಲಿನ ಪದ್ಯವು ಮಾತ್ರಾಗಣದ **'ಕಂದ ಪದ್ಯ'**ದಲ್ಲಿ ರಚಿತವಾಗಿದೆ.

**ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ.** **1 * 3 = 3**

| | |
|---|---|
| **ಅಲಂಕಾರವನ್ನು ಹೆಸರಿಸುವುದು** | **1 ಅಂಕ** |
| **ಲಕ್ಷಣ ಬರೆಯುವುದು** | **1 ಅಂಕ** |
| **ಸಮನ್ವಯ ಮಾಡುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

**24. ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು.**

**ಅಲಂಕಾರ** :– ಉಪಮಾಲಂಕಾರ

**ಲಕ್ಷಣ** :– ಎರಡು ವಸ್ತುಗಳಿಗಿರುವ (ಉಪಮೇಯ ಉಪಮಾನಗಳಿಗಿರುವ) ಸಾದೃಶ್ಯ ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾಲಂಕಾರ ಎನ್ನುವರು.

**ಉಪಮೇಯ** :– ಗೀಜಗನ ಗೂಡುಗಳು

**ಉಪಮಾನ** :– ತೊಟ್ಟಿಲು

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ತೂಗಾಡುವುದು

**ಸಮನ್ವಯ** :– ಇಲ್ಲಿ ಉಪಮೇಯವಾದ ಗೀಜಗನ ಗೂಡುಗಳನ್ನು ಉಪಮಾನವಾದ ತೊಟ್ಟಿಲಿಗೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಇದು ಉಪಮಾಲಂಕಾಕ್ಕೆ ಉದಾಹರಣೆಯಾಗಿದೆ.

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1 * 3 = 3**

| | |
|---|---|
| **ಗಾದೆಯ ಮಹತ್ತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

**25. ತುಂಬಿದ ಕೊಡ ತುಳುಕುವುದಿಲ್ಲ.**

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **'ತುಂಬಿದ ಕೊಡ ತುಳುಕುವುದಿಲ್ಲ'** ಎಂಬ ಗಾದೆಯೂ ಸಹ ಒಂದಾಗಿದೆ.

ಒಂದು ಕೊಡದ ತುಂಬ ನೀರನ್ನು ತುಂಬಿ ಹೊತ್ತೊಯ್ದರೆ ನೀರಿನ ಸ್ವಲ್ಪ ಭಾಗವೂ ಹೊರ ಚೆಲ್ಲುವುದಿಲ್ಲ; ಶಬ್ದವನ್ನು ಉಂಟುಮಾಡುವುದಿಲ್ಲ. ಅದೇ ಕೊಡದಲ್ಲಿ ಅರ್ಧದಷ್ಟು ಮಾತ್ರ ನೀರು ತುಂಬಿ, ಹೊತೊಯ್ದರೆ ಗುಳುಗುಳು ಶಬ್ದವನ್ನು ಮಾಡುತ್ತಾ, ನೀರು ಚೆಲ್ಲುತ್ತಾ, ನಮ್ಮನ್ನು ಒದ್ದೆ ಮಾಡುತ್ತದೆ. ಇದು ಕೊಡದಲ್ಲಿ ನೀರು ತುಂಬಾ ಇಲ್ಲ ಎನ್ನುವುದನ್ನು ಸಹ ಸೂಚಿಸುತ್ತದೆ. ಹಾಗೆಯೇ ನಿಜವಾದ ವಿದ್ಯಾವಂತರಾದವರು; ನೀತಿವಂತ

ಪ್ರಾಜ್ಞರು ಹೆಚ್ಚು ಮಾತನಾಡುವುದಿಲ್ಲ; ಆಟಾಟೋಪ ತೋರುವುದಿಲ್ಲ; ಆದರೆ ಪ್ರಯೋಜನಕಾರಿಗಳಾಗಿರುತ್ತಾರೆ. 'ಅಲ್ಪವಿದ್ಯಾ ಮಹಾಗರ್ವಿ' ಎಂಬ ಗಾದೆಯೇ ಇದೆ. ಅಲ್ಪ ವಿದ್ಯಾವಂತರು ಹೆಚ್ಚು ಹಾಗೂ ಅನಾವಶ್ಯಕ ಮಾತನಾಡಿ, ತಮ್ಮ ಟೊಳ್ಳುತನವನ್ನು ಪ್ರದರ್ಶಿಸುತ್ತಾರೆ. ಗೊನೆ ತುಂಬಿದ ಬಾಳೆಯ ಗಿಡದಂತೆ ಬಾಗಿ, ವಿನಯದಿಂದ ಇದ್ದು; ಅಗತ್ಯ ಸಮಯದಲ್ಲಿ ತಮ್ಮ ವಿದ್ಯೆಯನ್ನು, ಮಾತನ್ನು ಪ್ರದರ್ಶಿಸಬೇಕು ಎಂಬುದೇ ಪ್ರಸ್ತುತ ಗಾದೆಯ ಒಳಾರ್ಥವಾಗಿದೆ.

**ಅಥವಾ**

**ದೂರದ ಬೆಟ್ಟ ನುಣ್ಣಗೆ**

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **'ದೂರದ ಬೆಟ್ಟ ನುಣ್ಣಗೆ'** ಎಂಬ ಗಾದೆಯೂ ಸಹ ಒಂದಾಗಿದೆ.

ದೂರದಲ್ಲಿ ಕಾಣುವ ಬೆಟ್ಟವು ನಯವಾಗಿ, ಕಲ್ಲುಮುಳ್ಳುಗಳಿಲ್ಲದೆ, ಹಳ್ಳಕೊಳ್ಳಗಳಿಲ್ಲದೆ ಇದೆಯೇನೋ ಎಂಬಂತೆ ಭಾಸವಾಗುತ್ತದೆ. ಆದರೆ ಹತ್ತಿರ ಹೋದಾಗಲೇ ಅದು ಬಂಡೆ ಕಲ್ಲುಗಳ ಒರಟುತನದಿಂದಲೂ, ಕಲ್ಲುಮುಳ್ಳುಗಳಿಂದಲೂ, ಹಳ್ಳಕೊಳ್ಳಗಳಿಂದಲೂ ಕೂಡಿದೆ ಎಂಬ ಅರಿವು ಉಂಟಾಗುತ್ತದೆ. ಇದೇರೀತಿ ಎಷ್ಟೋ ವ್ಯಕ್ತಿಗಳ ಬಗ್ಗೆ ಅವರು ತುಂಬಾ ಒಳ್ಳೆಯವರೆಂದೂ, ಗುಣವಂತರೆಂದೂ ಭಾವಿಸಿರುತ್ತೇವೆ. ಆದರೆ ಅವರ ಹತ್ತಿರದ ಸಹವಾಸ ಸಿಕ್ಕಾಗಲೇ ಅವರ ಒಂದೊಂದೇ ಹುಳುಕುಗಳು ಗೊತ್ತಾಗುತ್ತಾ ಹೋಗುತ್ತವೆ. ಯಾವುದೋ ಒಂದು ಕೆಲಸ ಕೂಡ ಅತ್ಯಂತ ಸುಲಭ ಎಂದೂ, ಸಂತಸದಾಯಕ ಎಂದೂ, ಲಾಭದಾಯಕ ಎಂದೂ ಅಂದುಕೊಂಡಿರುತ್ತೇವೆ. ಆದರೆ ಆ ಕಾರ್ಯಕ್ಕೆ ಕೈಹಚ್ಚಿದಾಗಲೇ ಅದರ ಕೊರತೆಗಳ, ಸಂಕಷ್ಟಗಳ ಅರಿವಾಗುವುದು. ಆದ್ದರಿಂದ ನೋಡಿದ್ದೆಲ್ಲಾ ಸತ್ಯ ಎಂದು ಒಂದೇ ಬಾರಿಗೆ ತೀರ್ಮಾನ ತೆಗೆದುಕೊಳ್ಳದೆ, ನಿಧಾನವಾಗಿ ಅವಲೋಕಿಸಿ ತೀರ್ಮಾನಿಸಬೇಕು ಎಂಬುದನ್ನು ಈ ಗಾದೆಯು ತಿಳಿಸುತ್ತದೆ.

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **4 * 3 = 12**

| | |
|---|---|
| **ಆಯ್ಕೆ : ಕರ್ತೃ – ಆಕರ – ಪಠ್ಯ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಸ್ವಾರಸ್ಯ : ಅಂತರಾರ್ಥ – ಭಾಷೆ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

**26. "ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು"**

**ಆಯ್ಕೆ :** ಈ ವಾಕ್ಯವನ್ನು ಶ್ರೀ ಬಿ. ಎಂ. ಶ್ರೀ ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆಯ್ದ **'ಧರ್ಮಸಮದೃಷ್ಟಿ'** ಶಾಸನದಿಂದ ಆರಿಸಲಾಗಿದೆ.

**ಸಂದರ್ಭ :** ರಾಜನಾದ ವೀರಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಸೂಚಿಸುವ ಸಂದರ್ಭದಲ್ಲಿ ಶ್ರೀವೈಷ್ಣವರಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿದು ಪುನಶ್ಚೇತನ ಗೊಳಿಸಬೇಕು ಎಂಬ ವಿಶಾಲ ಮನೋಭಾವನೆಯನ್ನು ಈ ಮಾತಿನಲ್ಲಿ ಕಾಣಬಹುದಾಗಿದೆ.

**27. "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ"**

**ಆಯ್ಕೆ :–** ಪ್ರಸ್ತುತ ವಾಕ್ಯವನ್ನು ಶ್ರೀಮತಿ ರತ್ನಮ್ಮ ಅವರ **'ಡಾ. ಎಸ್. ರಾಧಾಕೃಷ್ಣನ್ – ಜೀವನ ಸಾಧನೆ' ಹಾಗೂ ಎ. ಎನ್. ಮೂರ್ತಿರಾವ್ ಅವರ 'ಚಿತ್ರಗಳು–ಪತ್ರಗಳು** ಕೃತಿಗಳಿಂದ ಆಯ್ದು, ಪಠ್ಯ ಪುಸ್ತಕ ಸಮಿತಿ ಅವರು ರಚಿಸಿದ **'ಆದರ್ಶ ಶಿಕ್ಷಕ ಸರ್ವೇಪಲ್ಲಿ ರಾಧಾಕೃಷ್ಣನ್'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ರಾಧಾಕೃಷ್ಣನ್ ಅವರು ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣ ಮಾಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ. ಈ ಮಾತನ್ನು ರಾಧಾಕೃಷ್ಣನ್ ಅವರು ಕೆನಡಾ ದೇಶದ ರೇಡಿಯೋ ಪ್ರಸಾರ ಭಾಷಣದಲ್ಲಿ ಹೇಳುತ್ತಾರೆ.

**ಸ್ವಾರಸ್ಯ :–** ರಾಧಾಕೃಷ್ಣನ್ ಅವರಲ್ಲಿ ಇದ್ದ ಮಾನವತೆಯ ಪ್ರೇಮ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

**28. "ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಕಯ್ಯಾರ ಕಿಞ್ಞಣ್ಣ ರೈ** ಅವರು ಸಂಪಾದಿಸಿರುವ **'ಶತಮಾನದ ಗಾನ'** ಕೃತಿಯಿಂದ ಆಯ್ದ **'ಹೊಸಹಾಡು'** ಎಂಬ ಕವನದಿಂದ ಆರಿಸಲಾಗಿದೆ.

**ಸಂದರ್ಭ :–** ಸೋಮಾರಿತನ ಮತ್ತು ನಿದ್ದೆಯಿಂದ ಎಚ್ಚರಗೊಳ್ಳಬೇಕು. ವೀರತನದ ಹಾಡು ಆಕಾಶ ಭೂಮಿಗಳಲ್ಲಿ ಮೊಳಗಬೇಕು. ನಡೆನುಡಿಗಳಲ್ಲಿ ಕ್ರಾಂತಿಕಿಡಿ ಕೆರಳಬೇಕು ಎಂದು ಕವಿಗಳು ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಲೋಕದ ಜನರಲ್ಲಿ 'ನಡೆಗೆ ತಕ್ಕ ನುಡಿ; ನುಡಿಗೆ ತಕ್ಕ ನಡೆ' ಇರುವ ಕ್ರಾಂತಿಕಾರಕ ಮನೋಭಾವ ಚಿಮ್ಮಬೇಕು ಎಂಬುದನ್ನು ಕವಿಗಳು ಈ ಮಾತಿನ ಮೂಲಕ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾರೆ.

**29. "ಚಂದಿರನೋ ಭಾಸ್ಕರನೋಯೆಂಬಂತೆ"**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ರತ್ನಾಕರವರ್ಣಿ** ಅವರು ರಚಿಸಿರುವ **'ಭರತೇಶ ವೈಭವ'** ಕೃತಿಯಿಂದ ಆಯ್ದ **'ಸಿರಿಯನಿನ್ನೇನ ಬಣ್ಣಿಪೆನು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** "ಛತ್ರ ಚಾಮರಗಳ ಸಾಲಿನಲ್ಲಿ ಭರತ ಚಕ್ರವರ್ತಿ ಪ್ರಕಾಶಮಾನವಾಗಿ ರಾರಾಜಿಸುತ್ತಿರುವ ಸಂದರ್ಭದಲ್ಲಿ ಬೆಳ್ಳಿಮೋಡದ ತೆರೆಯೊಳಗೆ ತೋರುವ ಮರೆಯಾಗುವ ಚಂದಿರನೋ ಭಾಸ್ಕರನೋಯೆಂಬಂತೆ ಕಾಣುತ್ತಿದ್ದನು" ಎಂದು ಕವಿ ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಮೋಡದ ಮರೆಯಲ್ಲಿ ಶೋಭಿಸುವ ಸೂರ್ಯಚಂದ್ರರಂತೆ ಭರತಚಕ್ರವರ್ತಿ ಶೋಭಿಸುತ್ತಿದ್ದನು ಎಂದು ಕವಿಯು ಈ ಮಾತಿನ ಮೂಲಕ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **4 * 1 = 4**

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1 ಅಂಕ)**

30. **ಬುದ್ಧನೆಂದರೆ** ನಿತ್ಯ ಬುದ್ಧನೆಂದರೆ ಸತ್ಯ
ಬುದ್ಧನೆಂದರೆ ಶಾಂತಿ ಬುದ್ಧನೆಂದರೆ ಕ್ರಾಂತಿ
ಬುದ್ಧನೆಂದರೆ ಕರುಣೆ ಬುದ್ಧನೆಂದರೆ ಬೆಳಕು
ಲುಂಬಿನಿಯ ಬನಕೆ ವೈಶಾಖ **ಬಂದಂತೆ**

**–ಬಾರಯ್ಯ ಬಾರೊ**

**ಅಥವಾ**

**ಬಾರಯ್ಯ** ಬಾರೊ ಜಾತಿಯ ಸೀಮೆಯಾಚೆ
ಬಾರಯ್ಯ ಬಾರೊ ಧರ್ಮದ ಗಡಿಯಾಚೆ
ಲಿಂಗಭೇದ ಬೇಕಿಲ್ಲ ಮೇಲು ಕೀಳು ಇಲ್ಲಿಲ್ಲ
ಬುದ್ಧನಡೆಯಮ್ಮನಡೆ ಬುದ್ಧನುಡಿಯಮ್ಮ**ನುಡಿ**

**–ಬಾರಯ್ಯ ಬಾರೊ**

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.**

**4 * 1 = 4**

| | |
|---|---|
| **ಮೌಲ್ಯವನ್ನು ಗುರುತಿಸುವುದು** | **1. ಅಂಕ** |
| **ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ** | **3. ಅಂಕಗಳು** |
| **ಒಟ್ಟು** | **4. ಅಂಕಗಳು** |

**31. ಮಾತಿನೊಳಗ ಮಾತಿಲ್ಲದವನ ಸ್ನೇಹ**
**ಜಾತಿಜನ್ಮಕಬೇಡ ।**
**ಹೀನ ಮನುಷ್ಯರ ಸ್ನೇಹ ಮಾಡಿ**
**ನೀನು ಕೆಡಲಿಬೇಡ ॥**

ಈ ಪದ್ಯಭಾಗವನ್ನು ಶ್ರೀ **ಕಡಕೋಳ ಮಡಿವಾಳಪ್ಪನವರು** ರಚಿಸಿರುವ **ತತ್ತ್ವಪದಗಳಿಂದ** ಆಯ್ದ **'ಗುರುಕರುಣೆ'** ಎಂಬ ತತ್ತ್ವಪದದಿಂದ ಆರಿಸಿಕೊಳ್ಳಲಾಗಿದೆ.

ತತ್ತ್ವಪದಕಾರರು "ಗುರುಕರುಣವಿಲ್ಲದವರ ಸ್ನೇಹವನ್ನು ಸಾಯುವತನಕ ಮಾಡಬಾರದು. ತಾನಾಡುವ ಮಾತಿನಂತೆ ನಡೆದುಕೊಳ್ಳದವನ ಸ್ನೇಹವನ್ನು ಜನ್ಮಜನ್ಮಾಂತರಕ್ಕೂ ಮಾಡಬಾರದು ಹಾಗೂ ಹೀನಮನುಷ್ಯನ ಸ್ನೇಹವನ್ನು ಮಾಡಿ ಕೆಡಬಾರದು" ಎಂದು ತಿಳಿಸಿದ್ದಾರೆ.

ಈ ಪದ್ಯಭಾಗದಲ್ಲಿ ಗುರುಭಕ್ತಿ, ನಡೆ–ನುಡಿ ಹಾಗೂ ಗೆಳೆತನ ಮೊದಲಾದ ಮೌಲ್ಯಯುತ ಅಂಶ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿವೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 * 4 = 8**

| | |
|---|---|
| **ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ** | **3 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕಗಳು** |
| **ಒಟ್ಟು** | **4 ಅಂಕಗಳು** |

**32. 'ದುರ್ಯೋಧನ ಮತ್ತು ದುರ್ಜಯರ ನಡುವೆ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.**

ಯುದ್ಧದಲ್ಲಿ ತೊಡೆ ಮುರಿದುಕೊಂಡು ನೆಲದ ಮೇಲೆ ಬಿದ್ದಿರುವ ದುರ್ಯೋಧನನನ್ನು ಕಂಡ ದುರ್ಜಯನು ತನ್ನ ತಂದೆ ನೆಲದ ಮೇಲೆ ಬಿದ್ದಿರುವುದನ್ನು ಕಂಡು ಆಶ್ಚರ್ಯಪಡುತ್ತಾನೆ. ದುರ್ಯೋಧನನು "ಇಲ್ಲಿಗೇಕೆ ಬಂದೆ" ಎಂದು ಮಗನನ್ನು ಪ್ರಶ್ನಿಸಿದಾಗ, "ನೀವು ತಡಮಾಡಿದಿರಿ, ಅದಕ್ಕೆ ಬಂದೆ" ಎನ್ನುತ್ತಾನೆ. ದುರ್ಜಯನು ತೊಡೆಯ ಮೇಲೆ ಕುಳಿತುಕೊಳ್ಳಲು ಬಂದಾಗ ದುರ್ಯೋಧನನು "ಅಪ್ಪಾ ಕಷ್ಟ" ಎಂದು ತಡೆಯುತ್ತಾನೆ. ಆಗ ದುರ್ಜಯನು "ಅಪ್ಪಾ, ತೊಡೆಯ ಮೇಲೆ ಕುಳಿತುಕೊಳ್ಳಲು ಬಂದರೆ ಏಕೆ ತಡೆಯುತ್ತೀರಿ?" ಎನ್ನುತ್ತಾನೆ. ಆಗ ದುರ್ಯೋಧನನು "ಇದುವರೆಗೂ ನೀನು ಕುಳಿತು ಆಡಿ, ಮಲಗಿದ್ದ ಈ ತೊಡೆ ಇನ್ನು ನಿನ್ನ ಭಾಗ್ಯಕ್ಕಿಲ್ಲವಪ್ಪ" ಎನ್ನುತ್ತಾನೆ. ದುರ್ಜಯನು "ಅಪ್ಪಾಜಿ, ನೀವೆಲ್ಲಿಗೆ ಹೋಗುತ್ತೀರಿ" ಎಂದಾಗ, "ನನ್ನ ತಮ್ಮಂದಿರು ಇರುವಲ್ಲಿಗೆ ಹೋಗುತ್ತೇನೆ" ಎನ್ನುತ್ತಾನೆ. ಆಗ ಮುಗ್ಧ ಬಾಲಕ ದುರ್ಜಯನು "ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ" ಎಂದಾಗ ದುರ್ಯೋಧನನು "ವೃಕೋದರನನ್ನು ಕೇಳು ಹೋಗು" ಎನ್ನುತ್ತಾನೆ. ಇವರಿಬ್ಬರ ಸಂಭಾಷಣೆಯಲ್ಲಿ ದುರ್ಜಯನ ಮುಗ್ಧತೆ ಮತ್ತು ದುರ್ಯೋಧನನ ಪುತ್ರಪ್ರೇಮ ಅಭಿವ್ಯಕ್ತಗೊಂಡಿದೆ.

**ಅಥವಾ**

**ಅಶ್ವತ್ಥಾಮನು ದುರ್ಯೋಧನನ ಬಳಿ ಸಾರುವ ಮೊದಲು ಆಡಿದ ನುಡಿಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.**

ಅಶ್ವತ್ಥಾಮನು ದುರ್ಯೋಧನನ ಬಳಿಸಾರುವ ಮೊದಲು "ಸಮರಶ್ರೇಷ್ಠ ರಾಜರೇ ಕೇಳಿ, ನೀವೆಲ್ಲ ಕಿವಿಗೊಟ್ಟು ಕೇಳಿ, ಠಕ್ಕಿಗೊಳಗಾಗಿ ತೊಡೆ ಮುರಿಸಿಕೊಂಡ ಕೌರವನು ನಾನಲ್ಲ! ಶಿಥಿಲವೂ ವಿಫಲವೂ ಆದ ಅಸ್ತ್ರಗಳನ್ನು ಹಿಡಿದ ಸೂತಪುತ್ರ ನಾನಲ್ಲ! ಆಯುಧವನ್ನು ಹಿಡಿದೆತ್ತಿ ಝಳಪಿಸಿ ರಭಸದಿಂದ ಬಂದು, ಈ ರಣಾಂಗಣದಲ್ಲಿ ಏಕಾಂಗಿಯಾಗಿ ನಿಂತಿದ್ದೇನೆ; ನಾನು ದ್ರೋಣಪುತ್ರ! ನಮ್ಮ ತಂದೆಗೆ ಉತ್ತರಕ್ರಿಯೆಗಳನ್ನು ಮಾಡುವಷ್ಟರಲ್ಲಿಯೇ ಕುರುಕುಲತಿಲಕಪ್ರಾಯನಾದ ದುರ್ಯೋಧನನು ಪಾಂಡವರಿಂದ ಮೋಸಕ್ಕೆ ಒಳಗಾದನಲ್ಲಾ! ರಥಗಳ ಮೇಲೆ, ಆನೆಗಳ ಮೇಲೆ ಕುಳಿತು, ಕೈಗಳಲ್ಲಿ ಬಿಲ್ಲುಗಳನ್ನು ಹಿಡಿದು, ಅಂಜಲಿಬದ್ಧರಾಗಿ ಉತ್ಕಂಠತೆಯಿಂದ ದುರ್ಯೋಧನನ ಆಜ್ಞೆಗಾಗಿ ಕಾಯುತ್ತಿದ್ದ ಹನ್ನೊಂದು ಅಕ್ಷೋಹಿಣಿ ಸೇನೆಯ ರಾಜರಿದ್ದರು; ಪರಶುರಾಮನ ಹರಿತವಾದ ಬಾಣಗಳೂ ಭೇದಿಸಲಾರದ ಕವಚವನ್ನು ತೊಟ್ಟ ಭೀಷ್ಮಾಚಾರ್ಯರಿದ್ದರು; ಮಹಾ ಯೋಧಾಗ್ರಣಿಯಾದ ನಮ್ಮ ತಂದೆಯಿದ್ದರು; ರಥದ ಮುಂಚೂಣಿಯಲ್ಲಿ ಇಂಥವರಿದ್ದೂ, ಸ್ವಯಂ ಅತಿರಥನಾದ ದುರ್ಯೋಧನನಿಗೆ ಕಾಲಮಹಿಮೆಯಿಂದ ಸೋಲಾಯಿತು!" ಎಂದು ನುಡಿದನು.

**33. ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ ಗಾನರಾಣಿಯರು ಹೇಳಿದ ಮಾತುಗಳನ್ನು ತಿಳಿಸಿ.**

ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ, ಗಾನರಾಣಿಯರು "ಬಡತನದ ಸಮಯದಲ್ಲಿ ಆನೆಯು ದೊರೆತು ಫಲವೇನು? ಬಾಯಾರಿಕೆಯ ಸಮಯದಲ್ಲಿ ತುಪ್ಪವು ದೊರಕಿ ಫಲವೇನು? ರೋಗ ಬಂದು ಬಿದ್ದಿರುವಾಗ ರಂಭೆಯು ದೊರಕಿ ಫಲವೇನು? ಸಾಯುವ ಸಮಯದಲ್ಲಿ ರಾಜ್ಯದ ದೊರೆತನ ದೊರಕಿ

ಫಲವೇನು? ಕಡುಬಿಸಿಲಿನಿಂದ ಬಳಲಿ ಬೆಂಡಾಗಿರುವ ಸಮಯದಲ್ಲಿ ನಮಗೆ ನೀನು ಪ್ರೀತಿಯಿಂದ ಆಭರಣಗಳನ್ನು ಕೊಟ್ಟು ಫಲವೇನು?" ಸಮುದ್ರದಲ್ಲಿ ಮುಳುಗುವವನಿಗೆ ತೆಪ್ಪವನ್ನು, ಬಡವನಿಗೆ ಚಿನ್ನವನ್ನು, ಅತಿರೋಗಿಗೆ ಅಮೃತವನ್ನು ಕೊಟ್ಟರೆ ಅವರು ಸಂತೋಷವನ್ನು ಹೊಂದುವರು. ಅವರನ್ನು ಹೋಲುವ ನಮಗೆ ಸುಡುಸುಡುನೆ ಸುಡುವ ಬಿರುಬಿಸಿಲ ಸೆಕೆಯಲ್ಲಿ ಬಿಸಿ ಉಸಿರು ಬಂದು, ಬಿಸಿಲಿನಿಂದ ಉರಿಹತ್ತಿದೆ, ಬಾಯಿ ಬತ್ತಿಹೋಗಿದೆ, ಬಿಸಿಲ ಝಳದಿಂದ ಸಾವು ಆವರಿಸುತ್ತಿದೆ, ಈ ಸಮಯದಲ್ಲಿ ನಿನ್ನ ಮುತ್ತಿನ ಸತ್ತಿಗೆಯನ್ನು ಕೊಟ್ಟು ನಮ್ಮನ್ನು ಕಾಪಾಡು" ಎಂದರು.

**ಅಥವಾ**

**ಹರಿಶ್ಚಂದ್ರ ಮತ್ತು ಗಾನರಾಣಿಯರ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.**

ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ, ಗಾನರಾಣಿಯರು "ಬಡತನದ ಸಮಯದಲ್ಲಿ ಆನೆಯು ದೊರೆತು ಫಲವೇನು? ಬಾಯಾರಿಕೆಯ ಸಮಯದಲ್ಲಿ ತುಪ್ಪವು ದೊರಕಿ ಫಲವೇನು? ರೋಗಬಂದು ಬಿದ್ದಿರುವಾಗ ರಂಭೆಯು ದೊರಕಿ ಫಲವೇನು? ಸಾಯುವ ಸಮಯದಲ್ಲಿ ರಾಜ್ಯದ ದೊರೆತನ ದೊರಕಿ ಫಲವೇನು? ಕಡುಬಿಸಿಲಿನಿಂದ ಬಳಲಿ ಬೆಂಡಾಗಿರುವ ಸಮಯದಲ್ಲಿ ನಮಗೆ ನೀನು ಪ್ರೀತಿಯಿಂದ ಆಭರಣಗಳನ್ನು ಕೊಟ್ಟು ಫಲವೇನು?" ಸಮುದ್ರದಲ್ಲಿ ಮುಳುಗುವವನಿಗೆ ತೆಪ್ಪವನ್ನು, ಬಡವನಿಗೆ ಚಿನ್ನವನ್ನು, ಅತಿರೋಗಿಗೆ ಅಮೃತವನ್ನು ಕೊಟ್ಟರೆ ಅವರು ಸಂತೋಷವನ್ನು ಹೊಂದುವರು. ಅವರನ್ನು ಹೋಲುವ ನಮಗೆ ಸುಡುಸುಡುನೆ ಸುಡುವ ಬಿರುಬಿಸಿಲ ಸೆಕೆಯಲ್ಲಿ ಬಿಸಿ ಉಸಿರು ಬಂದು, ಬಿಸಿಲಿನಿಂದ ಉರಿಹತ್ತಿದೆ, ಬಾಯಿ ಬತ್ತಿಹೋಗಿದೆ, ಬಿಸಿಲ ಝಳದಿಂದ ಸಾವು ಆವರಿಸುತ್ತಿದೆ, ಈ ಸಮಯದಲ್ಲಿ ನಿನ್ನ ಮುತ್ತಿನ ಸತ್ತಿಗೆಯನ್ನು ಕೊಟ್ಟು ನಮ್ಮನ್ನು ಕಾಪಾಡು" ಎಂದರು. ಪ್ರೀತಿಯಿಂದ ಎಲ್ಲವನ್ನು ಕೊಡಬಹುದು, ಬಿಡಬಹುದು. ತಾಯಿಯನ್ನು, ತಂದೆಯನ್ನು, ಸತಿಯನ್ನು, ದೇವರನ್ನು, ಮನಸಾರೆ ನಂಬಿ ವಿಶ್ವಾಸವಿಟ್ಟ ಪರಿವಾರವನ್ನು ಕೊಡುವ ಅತಿಶೂರರು ಜನರಲ್ಲಿ (ಲೋಕದಲ್ಲಿ) ಜನಿಸರು" ಎಂದನು. ಆಗ ಗಾನರಾಣಿಯರು ಹರಿಶ್ಚಂದ್ರನನ್ನು ಕುರಿತು "ಮಹಾರಾಜ ನೀನು ಈಗ ಹೇಳಿದ ಅನಿತರಲ್ಲಿ ಬೇಡಿದೊಡೆ ಕೊಡಬೇಡ. ಸತ್ತಿಗೆಯನ್ನು ಕೊಡು ಎಂದರೆ ಲೋಭವೇಕೆ?" ಎಂದರು.

34. **ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01*03 =04 (2+1)**
**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 + 1 ಅಂಕಗಳು)**

**ಪ್ರಶ್ನೆಗಳು :**

1. **ಅಂದವಾದ ಬರೆವಣಿಗೆಯ ಬಗೆಗೆ ಗಾಂಧೀಜಿ ಅವರ ಅಭಿಪ್ರಾಯವೇನು? (2 ಅಂಕಗಳು)**
   ಮಹಾತ್ಮ ಗಾಂಧೀಜಿ ಅವರು ಅಂದವಾದ ಬರೆವಣಿಗೆಯ ಮಹತ್ತ್ವವನ್ನು ಕುರಿತು ಹೀಗೆ ಹೇಳುತ್ತಾರೆ. "ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಅವಶ್ಯಕ ಅಂಶವಲ್ಲವೆಂಬ ಭಾವನೆ ನನಗೆ ಹೇಗೆ ಬಂತೋ ಕಾಣೆ. ಇಂಗ್ಲೆಂಡ್‌ಗೆ ಹೋಗುವವರೆಗೆ ನನ್ನಲ್ಲಿ ಇದೇ ಭಾವನೆ ಇತ್ತು. ಅನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತುಪೋಣಿಸಿದಂತಿದ್ದ ಸುಂದರ ಬರೆವಣಿಗೆ ನೋಡಿ, ನನಗೆ ನಾಚಿಕೆಯೂ ಪಶ್ಚಾತ್ತಾಪವೂ ಉಂಟಾಯಿತು. ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ನಾನು ಅರಿತೆನು.

2. **ಯಾವುದನ್ನು ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಬೇಕು? (1 ಅಂಕ)**
   ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಬೇಕು?

35. ನಿಮ್ಮನ್ನು ಚಾಮರಾಜನಗರದ ಜೆ. ಎಸ್. ಎಸ್. ಪ್ರೌಢಶಾಲೆಯ ವಿದ್ಯಾರ್ಥಿ 'ವಸಂತ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಡುವಂತೆ ಕೋರಿ, ನಿಮ್ಮ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ. 1 * 4 = 4

**ಅಥವಾ**

ನಿಮ್ಮನ್ನು ಕೊಡಗು ಜಿಲ್ಲೆಯ ಸೋಮವಾರಪೇಟೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿ 'ಯಶವಂತ' ಎಂದು ಭಾವಿಸಿಕೊಂಡು, ಕೊಡಗು ಜಿಲ್ಲೆಯ ಕುಶಾಲನಗರ ನಿವಾಸಿಯಾದ ನಿಮ್ಮ ತಂದೆ 'ಬಸವಣ್ಣ' ಎಂಬುವವರನ್ನು, ನಿಮ್ಮ ಶಾಲೆಯ ಪ್ರತಿಭಾ ಕಾರಂಜಿ ಸಮಾರಂಭಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

| | |
|---|---|
| **ಇಂದ, ಗೆ, ಸಂಬೋಧನೆ, ವಿಷಯ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **2 ಅಂಕಗಳು** |
| **ಮುಕ್ತಾಯ, ಇಂತಿ, ಸ್ಥಳ, ದಿನಾಂಕ** | **1 ಅಂಕ** |
| **ಒಟ್ಟು** | **4 ಅಂಕಗಳು** |

**ಅಥವಾ**

| | |
|---|---|
| **ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **2 ಅಂಕಗಳು** |
| **ಮುಕ್ತಾಯ, ಇಂತಿ ಸಂಬೋಧನೆ, ಸಹಿ, ಹೊರ ವಿಳಾಸ** | **1 ಅಂಕ** |
| **ಒಟ್ಟು** | **4 ಅಂಕಗಳು** |

**36. ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ** ಬರೆಯಿರಿ. 1 * 4 = 4

*** ರಾಷ್ಟ್ರೀಯ ಹಬ್ಬಗಳ ಮಹತ್ತ್ವ**

*** ಸಮೂಹ ಮಾಧ್ಯಮಗಳು**

| | |
|---|---|
| **ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ** | **1 ಅಂಕ** |
| **ಒಡಲು / ಸಮರ್ಥ ವಿವರಣೆಯೊಂದಿಗೆ ವಿಷಯ ನಿರೂಪಣೆ** | **2 ಅಂಕಗಳು** |
| **ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ** | **1 ಅಂಕ** |
| **ಒಟ್ಟು** | **4 ಅಂಕಗಳು** |

**---- 0 ----**